ಪ್ರಜಾವಾಣಿ

# ಸದನದ ಘನತೆ ಕುಸಿತ: ಹೊರಟ್ಟಿ ಬೇಸರ

## ಶಿಕ್ಷಕರ ಕ್ಷೇತ್ರದಿಂದ ಸತತ 8 ಬಾರಿ ಮೇಲ್ಮನೆಗೆ ಆಯ್ಕೆ • ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆ

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಹುದ್ದೆಯಿಂದ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನ-ಕ್ಕೇರಿದವರು ಬಸವರಾಜ ಹೊರಟ್ಟಿ. ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಯಡಹಳ್ಳಿ ಗ್ರಾಮದಿಂದ ಹುಬ್ಬಳ್ಳಿಗೆ ಬಂದು ಲ್ಯಾಮಿಂಗ್ಟನ್ ಶಾಲೆಯಲ್ಲಿ 1975ರಲ್ಲಿ ಶಿಕ್ಷಕರಾದರು. ಶಿಕ್ಷಕರ ಸಂಕಷ್ಟ ಕೊನೆಗಾಣಿಸಲು ಸಮಾನ ಮನಸ್ಕರ ಜೊತೆಗೆ 'ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘ' ಅಸ್ತಿತ್ವಕ್ಕೆ ತಂದರು. ರಾಜಕಾರಣ ದತ್ತ ಹೊರಳಿದ ಅವರು 1980ರಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯರಾದರು. ನಂತರದ ವರ್ಷಗಳಲ್ಲಿ ಅವರು ಶಿಕ್ಷಣ ಸೇರಿ ವಿವಿಧ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದರು. ಸದ್ಯಕ್ಕೆ ವಿಧಾನ ಪರಿಷತ್ತಿಗೆ ಎರಡನೇ ಬಾರಿ ಸಭಾಪತಿ ಆಗಿದ್ದಾರೆ.

ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಸತತ ಎಂಟು ಚುನಾವಣೆ ಗಳನ್ನು ಗೆದ್ದಿರುವ ಅವರ ಸಾಧನೆಯು 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ದಾಖಲಾಗಿದೆ. ವಿಧಾನ ಪರಿಷತ್‌ಗೆ ಸದಸ್ಯರಾಗಿ ಜೂನ್ 30ಕ್ಕೆ 44 ವರ್ಷ ಸಂದಿದವು. ಈ ಸಂದರ್ಭದಲ್ಲಿ 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

### 'ಶಿಕ್ಷಕರಿಗೆ, ಶಿಕ್ಷಣ ಕ್ಷೇತ್ರಕ್ಕೆ ಹಲವು ಕೊಡುಗೆ'



'ನಾನು ಶಿಕ್ಷಣ ಸಚಿವನಾದಾಗ, ಶಿಕ್ಷಕರ ನೇಮಕಾತಿ ಜೊತೆಗೆ ಉತ್ತರ ಕರ್ನಾಟಕದ ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದೆ. ಶಿಕ್ಷಕರ ವರ್ಗಾವಣೆ ನೀತಿ ಸುಧಾರಿಸಿದೆ. ಅನುದಾನಿತ ಶಾಲೆಗಳಿಗೂ ಬಿಸಿಯೂಟ ಯೋಜನೆ ವಿಸ್ತರಿಸಿದೆ. ಕಾನೂನು ಸಚಿವನಾಗಿ ಹುಬ್ಬಳ್ಳಿಯಲ್ಲಿ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಧಾರವಾಡಕ್ಕೆ ವಿಜ್ಞಾನ ಕೇಂದ್ರ ಮಂಜೂರು ಮಾಡಿದೆ. ಪಂಚಾಯತ್ ರಾಜ್ ಸಚಿವನಾಗಿ ಪಂಚಾಯಿತಿಗಳಿಗೆ ನೇರವಾಗಿ ಅನುದಾನ ಹಂಚಿಕೆ ಮಾಡಿದೆ'

**• ಶಾಲಾ ಶಿಕ್ಷಕನಿಂದ ವಿಧಾನ ಪರಿಷತ್ತಿನ ಸಭಾಪತಿಯವರೆಗಿನ 44 ವರ್ಷಗಳ ಪಯಣ ಹೇಗೆ ಅನ್ನಿಸುತ್ತದೆ?**

**ಹೊರಟ್ಟಿ:** ಶಿಕ್ಷಕರ ಹಿತಕ್ಕಾಗಿ ಆರಂಭಿಸಿದ ಹೋರಾಟ ಇಲ್ಲಿಯವರೆಗೆ ಕರೆತಂದಿದೆ. ಶಿಕ್ಷಕರ ಧ್ವನಿ ಆಗಿರುವೆ. ಪರಿಷತ್ ಸದಸ್ಯ, ಸಚಿವ ಮತ್ತು ಸಭಾಪತಿಯಾಗಿ ಅವರ ಹಿತ ಕಾಪಾಡಿರುವೆ. ಸದಸ್ಯನಾಗಿ ಪ್ರವೇಶಿಸಿದ ದಿನ ಭಾವುಕನಾಗಿದ್ದೆ. ಆಗಿನ ಸಭಾಪತಿ ಬಸವರಾಜ ನನಗೆ ಮಾತನಾಡಲು ಅವಕಾಶ ನೀಡಿದರು. ಶಿಕ್ಷಕರ ಸಮಸ್ಯೆ ಬಗ್ಗೆ 10 ನಿಮಿಷ ಮಾತನಾಡಿದೆ. ಎಲ್ಲರೂ ಶ್ಲಾಘಿಸಿದರು. ಇದು ಪವಿತ್ರ ಸ್ಥಳ, ಇಲ್ಲಿ ಪ್ರಾಮಾಣಿಕವಾಗಿ ಇರಲು ನಿರ್ಧರಿಸಿದೆ.

**• ಅಂದಿನ ಮತ್ತು ಇಂದಿನ ಕಲಾಪಗಳಿಗೂ ವ್ಯತ್ಯಾಸವಿದೆಯೇ?**

**ಹೊರಟ್ಟಿ:** ಹಿಂದೆ ಪರಿಷತ್‌ನಲ್ಲಿ ರಾಜಗೋಪಾಲ, ಎಸ್.ವೆಂಕಟ ರಾಮಣ, ಎ.ಕೆ. ಸುಬ್ಬಯ್ಯ, ಎಚ್. ನರಸಿಂಹಯ್ಯ, ಖಾದ್ರಿ ಶಾಮಣ್ಣ ರಂತಹ ಘಟಾನುಘಟಿಗಳು ಇದ್ದರು. ಅವರ ಮಾತು ಆಲಿಸುವುದೇ ಸುದೈವವಾಗಿತ್ತು. ಆದರೆ, ಈಗ ಮುಖ್ಯಮಂತ್ರಿ ಮಾತನಾಡಿದರೂ ಯಾರೂ ಆಲಿಸಲ್ಲ. ಟೀಕೆ, ಗದ್ದಲಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿದೆ. ಘನತೆ, ಗೌರವ ಕುಸಿದಿದೆ.

**• ವಿಧಾನ ಪರಿಷತ್ತು ಎಂಬುದು ರಾಜಕೀಯ ಪುನರ್ವಸತಿ ಕಲ್ಪಿಸುವ ತಾಣವಾಗಿದೆ ಎಂಬ ಮಾತಿದೆ. ನಿಜವೇ?**

**ಹೊರಟ್ಟಿ:** ವಿವಿಧ ಕ್ಷೇತ್ರಗಳ ತಜ್ಞರು, ಚಿಂತಕರು ವಿಧಾನ ಪರಿಷತ್ ಪ್ರವೇಶಿಸಬೇಕು ಮತ್ತು ಅವರ ವಿದ್ವತ್ತು ಸದ್ಬಳಕೆ ಆಗಬೇಕು ಎಂಬುದು ಉದ್ದೇಶ. ಆದರೆ, ವಿಧಾನಸಭೆ ಚುನಾವಣೆಯಲ್ಲಿ ಸೋತವರು ಅಥವಾ ಯಾವುದೋ ಒಂದು ಪುಸ್ತಕ ಬರೆದವರು ಲಾಬಿ ನಡೆಸಿ, ಪರಿಷತ್ತಿನ ಸದಸ್ಯತ್ವ ಗಿಟ್ಟಿಸಿ-ಕೊಳ್ಳಲು ಪ್ರಯತ್ನಿಸುತ್ತಾರೆ. ಅಂಥವರ ಬಗ್ಗೆ ಸರ್ಕಾರ ಮಾಡುವ ಶಿಫಾರಸನ್ನು ರಾಜ್ಯಪಾಲರು ತಿರಸ್ಕರಿಸಿದರೂ ಸರ್ಕಾರವು ಅವರನ್ನೇ ನೇಮಿಸುತ್ತದೆ. ಅದರ ಬಗ್ಗೆ ಬೇಸರವಿದೆ.

**• ಕಲಾಪ ಹಾಗೂ ಸದಸ್ಯರ ನಡವಳಿಕೆ ಸುಧಾರಿಸುವುದು ಹೇಗೆ?**

**ಹೊರಟ್ಟಿ:** ಕಲಾಪವನ್ನು ಸರಿಯಾದ ಸಮಯಕ್ಕೆ ಆರಂಭಿಸುವುದರ ಜೊತೆಗೆ ಸದಸ್ಯರ ನಡವಳಿಕೆ ಸುಧಾರಿಸಲು ತರಬೇತಿ ಕೊಡಿಸಲು ಪ್ರಯತ್ನಿಸಿದ್ದೇವೆ. ಆದರೆ, ಹಿಂದಿನ ಸದನಗಳ ಘನತೆ, ಗೌರವ ವಾಪಸ್ ಬರುವುದಿಲ್ಲ.

**• ಅವ್ವ ಸೇವಾ ಟ್ರಸ್ಟ್ ಸ್ಥಾಪಿಸಿ 12 ವರ್ಷಗಳಿಂದ ನೀವು ಕೈಗೊಂಡಿರುವ ಸಾಮಾಜಿಕ ಕಾರ್ಯಗಳು ಯಾವ್ಯಾವು?**

**ಹೊರಟ್ಟಿ:** ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತೇನೆ. ಬಡವರು, ವೃದ್ಧರಿಗೆ ನೆರವಾಗುತ್ತೇನೆ. ನನ್ನ ಸ್ವಗ್ರಾಮ ಯಡಹ-ಳ್ಳಿಯಲ್ಲಿ ಸರ್ಕಾರಿ ಶಾಲೆ ಆರಂಭಿಸಿದೆ. ಸಾವಿರಾರು ಮಕ್ಕಳಿಗೆ ಶಿಕ್ಷಣ ಸಿಗುತ್ತಿದೆ.